ಉಳಿಯುವುದೇ ಇಲ್ಲ. ಕಥೆ ವರ್ತಮಾನವಾಗಿ ಬಿತ್ತವಾಗುತ್ತದೆ. 'ಒಂದಾನೊಂದು ಕಾಲದಲ್ಲಿ...' ಎಂದು ಪ್ರಾರಂಭವಾಗುವ ಕಥೆ ಯಾವುದೋ ಕಾಲದ ಕಥೆಯಾಗದೆ, ಕಥೆಯೊಳಗೆ ಬರುವ ರಾಜಕುಮಾರ ರಾಜಕುಮಾರಿ ಇತ್ಯಾದಿ ಪಾತ್ರಗಳಿಗೆ ಕಥೆ ಕೇಳಲು ಕುಂತ ಮಕ್ಕಳ ಹೆಸರನ್ನೇ ಸೇರಿಸಿ ಅವರನ್ನೇ ಕಥಾನಾಯಕ



ಕಲೆ: ಶ್ರೀಕಂಠಮೂರ್ತಿ

ನಾಯಕಿಯರನ್ನಾಗಿಸಿ ಹೇಳುವುದರಿಂದ ಅದು ಈಗಿನ ಕಥೆಯೇ ಆಗುತ್ತದೆ. ಮಕ್ಕಳ ಕಥೆಯೇ ಆಗುತ್ತದೆ. ಹೀಗಾಗಿ ಕಥಾಹಂದರದಲ್ಲಿ ಕಾಲಪ್ರಜ್ಞೆಯೆಂಬುದು ಕಲ್ಪನೆಯ ಬೆನ್ನೇರಿ ಸಾರ್ವಕಾಲಿಕ ಮಹತ್ವ ಪಡೆಯುತ್ತದೆ. ಅಜ್ಜಿ ಕಥೆಗಳಲ್ಲಿ ಬಹುತೇಕ ಕಥೆಗಳು ಅಜ್ಜಿಯ, ಅರ್ಥಾತ್ ಮಹಿಳೆಯ ಬಂಧನ–ಬಿಡುಗಡೆಯನ್ನು ರೂಪಕದ ರೀತಿಯಲ್ಲಿ ಹೇಳುವ ಕಥೆಗಳೇ ಆಗಿವೆ. ರಾಕ್ಷಸನ ಬಂಧನಕ್ಕೆ ಸಿಕ್ಕಿಕೊಂಡು ನಿರೀಕ್ಷೆಯಲ್ಲಿರುವ ರಾಜಕುಮಾರಿ ಮಹಿಳೆಯ ಸಂಬಂಧದ ಪ್ರತೀಕವಾದರೆ, ಏಳು ಸಮುದ್ರದಾಚೆಯ ಕೀಳು ಸಮುದ್ರ – ಅದರಲ್ಲಿ ಏಳುಸುತ್ತಿನ ಕೋಟೆ, ಆ ಕೋಟೆಯ ಒಡೆಯ ರಾಕ್ಷಸ, ಆ ಕೋಟೆಯೊಳಗೆ ಬಂಧಿಯಾಗಿರುವ ರಾಜಕುಮಾರಿ, ಅವಳ ಬಿಡುಗಡೆಗಾಗಿ ಸಾಹಸಯಾತ್ರೆ ಕೈಗೊಳ್ಳುವ ರಾಜಕುಮಾರ, ಹೀಗೆ ಇಡೀ ಕಥೆ ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಸಿಕ್ಕಿ, ಬಂಧಿತಳಾಗಿರುವ ಹೆಣ್ಣಿನ ಜೀವನದ ಪ್ರತಿರೂಪಗಳೇ ಆಗಿ ಪ್ರತಿಮಾತ್ಮಕವಾಗಿ ಮಕ್ಕಳಲ್ಲಿ ಕಲ್ಪನೆ, ಸಾಹಸ ಇತ್ಯಾದಿ ಭಾವನೆಗಳನ್ನು ಅದ್ಭುತವಾಗಿ ಬೆಳೆಸುತ್ತವೆ. ಅಲ್ಲಿನ ರಾಜಕುಮಾರ ಪ್ರೀತಿ ಪ್ರೇಮಗಳ ಆಕೃತಿಯಾಗಿ ಮಕ್ಕಳ ಮನಸ್ಸಿನ ಪ್ರತಿಬಿಂಬವೇ ಆಗುತ್ತಾನೆ. ರಾಜಕುಮಾರಿ ಹೆಣ್ಣುಗಳ, ಅರ್ಥಾತ್ ಕಥೆ ಕೇಳುವ ಹೆಣ್ಣುಮಕ್ಕಳ ಭಾವಕೋಶವೇ ಆಗುತ್ತಾಳೆ. ಕೊನೆಗೆ ಕಥೆ ಸುಖಾಂತರದಲ್ಲಿ 'ಅವರಲ್ಲಿ ಚೆನ್ನಾಗಿದ್ದಾರೆ. ನಾವಿಲ್ಲಿ ಚೆನ್ನಾಗಿದ್ದೀವಿ' ಎಂದು ಮುಕ್ತಾಯವಾಗುತ್ತದೆ. ಮಕ್ಕಳ ಮನಸ್ಸು ಈ ಮುಕ್ತಾಯದ ಪರಿಣಾಮ ರಮಣೀಯತೆಯಲ್ಲಿ ಮುದಗೊಳ್ಳುತ್ತದೆ. ಹೀಗೆ ಹಲವು ಬಗೆಯ ಕಥೆ ಹೇಳುವ ಅಜ್ಜಿ ಜಾನಪದ ಜಗತ್ತಿನಲ್ಲಿ ಕಥೆಯ ಕಣಜವೇ ಆಗಿದ್ದಾಳೆ. ಮಕ್ಕಳನ್ನು ತನ್ನ ಸುತ್ತ ಕೂರಿಸಿಕೊಂಡು ಕಥೆ ಹೇಳುವ ಅಜ್ಜಿ ಆಟವನ್ನೂ ಆಡಿಸುತ್ತಾಳೆ. ಅದು ಕಣ್ಣಾಮುಚ್ಚಾಲೆಯ ಆಟವೆಂದೇ ಹೆಸರು ಪಡೆದಿದೆ. ಆ ಆಟದಲ್ಲಿ ಒಂದು ಮಗುವಿನ ಕಣ್ಣುಮುಚ್ಚಿ ಮಿಕ್ಕ ಮಕ್ಕಳನ್ನು ಅಡಗಿಕೊಳ್ಳಲು ಹೇಳುತ್ತಾಳೆ. ಅಡಗಿಕೊಂಡ ಮಕ್ಕಳನ್ನು ಹುಡುಕಲು ಹೇಳುವ ಮುನ್ನ ಅಜ್ಜಿ, ಆ ಆಟಕ್ಕೆ ಸಂಬಂಧಿಸಿದಂತೆ ಈ ಪದ ಹಾಡುತ್ತಾಳೆ.

ಕಣ್ಣಾ ಮುಚ್ಚೆ ಕಾಡೇಗೂಡು
ಉದ್ದಿನ ಮೂಟೆ ಉರುಳೇಹೋಯ್ತು
ನಮ್ಮಯ ಹಕ್ಕಿ ಬಿಟ್ಟೇ ಬಿಟ್ವೆ
ನಿಮ್ಮಯ ಹಕ್ಕಿ ಬಚ್ಚಿಟ್ಟು ಕೊಳ್ಳಿ.

ಜೀವನದ ಸಂಧ್ಯೆಯಲ್ಲಿರುವ ಅಜ್ಜಿ ಮತ್ತು ಬಾಳಿನ ಹೊಸ್ತಿಲಲ್ಲಿರುವ ಮಕ್ಕಳು ಆಡುವ ಆಟದಲ್ಲಿ ಬಳಸುವ ಈ ಪದ ಹೇಳುವವರ ಕಂಠಸಿರಿಗನುಗುಣವಾಗಿ ದೀರ್ಘ–ಹ್ರಸ್ವಗಳ ರಾಗವಿನ್ಯಾಸದಲ್ಲಿ ಬಿತ್ತರಗೊಳ್ಳುತ್ತದೆ. ಆಟದ ಕ್ರಿಯೆಯನ್ನು ಕುರಿತು ಇದು